**ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ**

ದೂರವಾಣಿ : 08472–256601
ಇ–ಮೇಲ್: dcf_tgulbarga@yahoo.co.in

**ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಕಲಬುರಗಿ ಪ್ರಾದೇಶಿಕ ಅರಣ್ಯ ವಿಭಾಗ, ಕಲಬುರಗಿ**

ಸಂಖ್ಯೆ: ಎ3/ಬಿಯುಡಿ/ಕಟ್ಟಡ/ಟೆಂಡರ್/ಸಿಆರ್–29/2019–20 ದಿನಾಂಕ:13.06.2019.

# ಮ್ಯಾನ್ಯುವಲ್–ಟೆಂಡರ್

ಈ ಮೂಲಕ ಸಾರ್ವಜನಿಕರಿಗೆ/ ಈ ವಿಭಾಗದ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2019–20 ನೇ ಸಾಲಿನಲ್ಲಿ ಕಲಬುರಗಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ಬರುವ ವಲಯಗಳಲ್ಲಿ ಸಿವ್ಹಿಲ್ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಭವ ಹೊಂದಿರುವವರು ಅಥವಾ ಅಂಗೀಕೃತ ಸಂಸ್ಥೆಗಳಿಂದ ಮಾತ್ರ **ಮ್ಯಾನ್ಯುವಲ್ ಟೆಂಡರ್** ಮೂಲಕ ಪ್ರತಿಯೊಂದು ಕಾಮಗಾರಿಗೆ ಪ್ರತ್ಯೇಕವಾಗಿ ಐಟಂವಾರು ಮೊಹರಾದ ಟೆಂಡರಗಳನ್ನು Single Cover ಪದ್ದತಿಯಲ್ಲಿ ಅಹ್ವಾನಿಸಲಾಗಿದೆ.

ಮೊದ**ಲನೆ** ಟೆಂಡರನ್ನು **ದಿನಾಂಕ: 04.07.2019** ರಂದು ಅಹ್ವಾನಿಸಲಾಗಿದೆ. ಒಂದು ವೇಳೆ ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ, **ಎರಡನೆಯ** ಬಾರಿಗೆ ಟೆಂಡರನ್ನು (ಮರು ಟೆಂಡರ್) ದಿನಾಂಕ: **11.07.2019** ರಂದು ನಡೆಸಲಾಗುವುದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

| ಕ್ರ. ಸಂ | ವಲಯ | ಕಾಮಗಾರಿಯ ವಿವರ | ಕೆಲಸದ ಸ್ಥಳ | ಪ್ರಮಾಣ | ಅಂದಾಜು ಮೊತ್ತ ರೂ. | ಇ.ಎಂ.ಡಿ. ಮೊಬಲಗು ರೂ. | ಕಾಮಗಾರಿ ಪೂರ್ಣಗೊಳಿಸ ಬೇಕಾದ ಅವಧಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| **I.** | **2406-01-101-2-83-Afforestation on Forest & Non-Forests Area-139-Major Works ( Tree Park )** | | | | | | |
| 1 | ಪ್ರಾದೇಶಿಕ ವಲಯ ಕಲಬುರಗಿ | Repairs to existing fountain | Uplaon Tree Park | - | 200000 | 5000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2 | ಪ್ರಾದೇಶಿಕ ವಲಯ ಆಳಂದ | Development of Children Play Area (Mild Levelling Wherever required and providing Sand) | Koralli Tree Park | - | 250000 | 6250 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| II | **2406-02-110-Wildlife Preservation-0-54-Nature Conservation, Wildlife Habitat Management & Man-Animal Conflict Measures-139-Major Works** | | | | | | |
| 1 | ವನ್ಯಜೀವಿ ವಲಯ ಚಿಂಚೋಳಿ | Formation of CPT | Lachmasagar & Linganagar | 3.5 Kms | 459700 | 11500 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2 | ವನ್ಯಜೀವಿ ವಲಯ ಚಿಂಚೋಳಿ | De-silting of existing water holes | Sheribhikanalli (Lal talab) | 1 Nos | 150000 | 3750 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |

| | | | | | | | |
|---|---|---|---|---|---|---|---|
| 3 | ವನ್ಯಜೀವಿ ವಲಯ ಚಿಂಚೋಳಿ | De-silting of existing water holes | Gottamgotta | 1 Nos | 150000 | 3750 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 4 | ವನ್ಯಜೀವಿ ವಲಯ ಚಿಂಚೋಳಿ | Construction of Multi Arch Check Dam | Sheribhikanalli | 1 Nos | 500000 | 12500 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 5 | ವನ್ಯಜೀವಿ ವಲಯ ಚಿಂಚೋಳಿ | Formation of Nalabund | Necharla | 1 Nos | 200000 | 5000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 6 | ವನ್ಯಜೀವಿ ವಲಯ ಚಿಂಚೋಳಿ | Formation of Nalabund | Kusrampalli | 1 Nos | 200000 | 5000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 7 | ವನ್ಯಜೀವಿ ವಲಯ ಚಿಂಚೋಳಿ | Construction of Gully Checks | Mombapur | 1 Nos | 150000 | 3750 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 8 | ವನ್ಯಜೀವಿ ವಲಯ ಚಿಂಚೋಳಿ | Construction of Gully Checks | Kollur | 1 Nos | 150000 | 3750 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 9 | ವನ್ಯಜೀವಿ ವಲಯ ಚಿಂಚೋಳಿ | Repairs to Existing road with Murram and formation of C.D | Gottamgotta | 1.5 Km | 400000 | 10000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| III | **2406-01-070-0-01-Roads, Bridges & Buildings (Maintenance)-139- Major works** | | | | | | |
| 1 | ಪ್ರಾದೇಶಿಕ ವಲಯ ಕಲಬುರಗಿ | Renovation to ACF Office Kalaburagi | Kalaburagi Aranya Bhavan | 1 No | 500000 | 12500 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2 | ಪ್ರಾದೇಶಿಕ ವಲಯ ಕಲಬುರಗಿ | Repairs and Maintenance to existing badminton court at Aranya Bhavana Premises Kalaburagi | Kalaburagi Aranya Bhavan | 1 No | 300000 | 7500 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 3 | ಚಿಂಚೋಳಿ ವನ್ಯಜೀವಿ ವಲಯ | Construction of Compound wall to Chindanoor Forest Guest House | Chindanoor | - | 400000 | 10000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| IV | **2406-01-070-0-05-Maint.of Residential Quarters--200-Maint.Exp.** | | | | | | |
| 1 | ಪ್ರಾದೇಶಿಕ ವಲಯ ಕಲಬುರಗಿ | Construction of Watchman shed at DCF Residential Qurters Kalaburagi | Kalaburagi Aranya Bhavana | - | 200000 | 5000 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |

**-: ಷರತ್ತುಗಳು :-**

1. **ಟೆಂಡರ್ ಫಾರ್ಮಗಳನ್ನು ಪಡೆಯಲು ಕೊನೆಯ ದಿನಾಂಕ: 03.07.2019 ಅಪರಾಹ್ನ 1:30 ಗಂಟೆಯವರೆಗೆ**

   **ಮೊದಲನೆ ಕರೆ**

   ಟೆಂಡರಿನ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04.07.2019** ಅಪರಾಹ್ನ 04:00 ಗಂಟೆಗೆ.

   ಟೆಂಡರಿನ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04.07.2019** ಅಪರಾಹ್ನ 05:30 ಗಂಟೆಗೆ.

2. **ಮೊದಲನೇ ಟೆಂಡರ್ ಯಶಸ್ವಿಯಾಗದೇ** ಇದ್ದ ಪಕ್ಷದಲ್ಲಿ ಮರುಟೆಂಡರ್

   ಟೆಂಡರ್ ಫಾರ್ಮಗಳನ್ನು ಪಡೆಯಲು ಕೊನೆಯ ದಿನಾಂಕ: **10.07.2019** ಅಪರಾಹ್ನ 1:30 ಗಂಟೆಯವರೆಗೆ

   ಟೆಂಡರಿನ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.07.2019** ಅಪರಾಹ್ನ 04:00 ಗಂಟೆಗೆ.

   ಟೆಂಡರಿನ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **11.07.2019** ಅಪರಾಹ್ನ 05:30 ಗಂಟೆಗೆ.

3. ಟೆಂಡರಿಗೆ ನೀಡುವ ಇ.ಎಂ.ಡಿ.ಗಳು ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಾದೇಶಿಕ ವಿಭಾಗ ಕಲಬುರಗಿ ರವರ ಹೆಸರಿನಲ್ಲಿ ಡಿ.ಡಿ ಮೂಲಕ ಸಲ್ಲಿಸತಕ್ಕದ್ದು.
4. ಈ ವಿಭಾಗದಲ್ಲಿ ನೊಂದಣಿಯಾಗಿರುವ ಅರಣ್ಯ ಗುತ್ತಿಗೆದಾರರು ಮಾತ್ರ ಈ ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.
5. ಟೆಂಡರಿಗೆ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಅರಣ್ಯ ಇಲಾಖೆಯ ಯಾವುದಾದರು ವಿಭಾಗದಲ್ಲಿ ಕಳೆದ **10 (ಹತ್ತು) ವರ್ಷದ** ಅವಧಿಯಲ್ಲಿ **ಡಿಫಾಲ್ಟರ್ ಆದವರು / ಕಪ್ಪುಪಟ್ಟಿಯಲ್ಲಿ ಸೇರಿದವರು / ಕಾಮಗಾರಿಯನ್ನು ಪೂರ್ಣಗೊಳಿಸದೇ ಬಿಟ್ಟುಹೋದವರು** ಟೆಂಡರಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
6. ಅರಣ್ಯ ಮೊಕದ್ದಮೆ/ ಇತರೆ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಎದುರಿಸುತ್ತಿರುವವರು / ಭಾಗಿಯಾಗಿರುವವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
7. ಷರತ್ತು ಕ್ರ.ಸಂ: (02) ಮತ್ತು (03)ರಲ್ಲಿ ಇರುವ ವಿಚಾರಗಳಲ್ಲಿ ಟೆಂಡರುದಾರರು ಭಾಗಿಯಾಗಿರುವುದಿಲ್ಲವೆಂದು **ರೂ. 20.00 ರ ಛಾಪಾ ಕಾಗದದಲ್ಲಿ ಶಪಥ ಪತ್ರವನ್ನು ನೋಟರಿಯಿಂದ ದೃಢೀಕರಿಸಿ** ಟೆಂಡರ್ ಫಾರಂನೊಂದಿಗೆ ಲಗತ್ತಿಸಿ ಟೆಂಡರಿನಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.
8. ಸಿವಿಲ್ ಕಾಮಗಾರಿಗಳಿಗೆ ಭಾಗವಹಿಸುವವರು ಕಡ್ಡಾಯವಾಗಿ ಲೋಕೋಪಯೋಗಿ (ಪಿ.ಡಬ್ಲ್ಯೂ.ಡಿ) ಇಲಾಖೆಯ ನೊಂದಾಯಿತ ಕ್ಲಾಸ್-3 ಗುತ್ತಿಗೆದಾರರಾಗಿರಬೇಕು ಈ ಬಗ್ಗೆ ದೃಡೀಕರಣ ಪತ್ರವನ್ನು ಟೆಂಡರ್ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು.
9. ಕಾಮಗಾರಿಗೆ ಭಾಗವಹಿಸುವ ಟೆಂಡರುದಾರರು ಸ್ವಂತ ಯಂತ್ರಗಳನ್ನು ಹೊಂದಿರತಕ್ಕದ್ದು ಮತ್ತು ಅರಣ್ಯ ಇಲಾಖೆಯಲ್ಲಿ ಕಳೆದ 05 ವರ್ಷಗಳಲ್ಲಿ ಅರಣ್ಯ ಕಾಮಗಾರಿ ಅಥವಾ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಿ ಅದನ್ನು ಒಂದು/ ಎರಡು ವರ್ಷದವರೆಗೆ ನಿರ್ವಹಣೆ ಮಾಡಿರುವ ಬಗ್ಗೆ ದೃಢೀಕರಣ ಪತ್ರ, ಯಂತ್ರಗಳ ಮಾಲೀಕತ್ವದ ದೃಢೀಕರಣ ಪತ್ರ ಮತ್ತು ಟೆಂಡರುದಾರರಲ್ಲಿ ಲಭ್ಯವಿರುವ ಇತರೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದೇ ಇದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.
10. ಟೆಂಡರ್‌ನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಕಂದಾಯ ಇಲಾಖೆಯಿಂದ ಪಡೆದಿರುವ **ರೂ. 02.00 ಲಕ್ಷ** ಮೌಲ್ಯದ **ರೆವಿನ್ಯೂ ಸಾಲ್ವೆನ್ಸಿ** (Revenue Solvency) ಪತ್ರವನ್ನು ಟೆಂಡರ್ ಫಾರಂನೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
11. ಮೇಲ್ಕಂಡ ದಿನಾಂಕಗಳಲ್ಲಿ ನಡೆಯುವ ಟೆಂಡರ್‌ನಲ್ಲಿ ಒಪ್ಪಿಗೆಯಾಗುವ ದರಗಳು 2018-19ನೇ ಸಾಲಿನ ಅಂತ್ಯದವರೆಗೆ (31-03-2019) ಚಾಲ್ತಿಯಲ್ಲಿರುತ್ತವೆ ಹಾಗೂ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿ ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಹೆಚ್ಚುವರಿಯಾಗುವ ಕೆಲಸವನ್ನು ಅನುಮೋದನೆಗೊಳ್ಳುವ ಟೆಂಡರಿನ ದರದಲ್ಲಿಯೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಯವರು ಸೂಚಿಸುವ ಜಾಗದಲ್ಲಿಯೇ ನಿರ್ವಹಿಸತಕ್ಕದ್ದು.
12. ನಿರ್ದಿಷ್ಟ ಕಾರಣಗಳನ್ನು ಸೂಚಿಸದೇ ಟೆಂಡರನ್ನು ಪರಿಷ್ಕರಿಸುವ/ ರದ್ದುಪಡಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕಲಬುರಗಿ ಇವರದಾಗಿದ್ದು, ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯಿಂದ ಪಡೆದುಕೊಳ್ಳತಕ್ಕದ್ದು.

13. **ಟೆಂಡರನ್ನು ಮುಂಗಡವಾಗಿ ಕರೆಯಲಾಗಿದ್ದು, ಕಾಮಗಾರಿಗಳ ಮುಂದೆ ನಮೂದಿಸಿರುವ ಟೆಂಡರ್ ಪರಿಮಾಣ/ ಮೊತ್ತದಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಪೂರ್ಣಗೊಂಡ ಕಾಮಗಾರಿಗಳ ವೆಚ್ಚವನ್ನು ಪಾವತಿಸಲಾಗುವುದು.**
14. ಟೆಂಡರ್ ದರವನ್ನು ನಮೂದಿಸುವಾಗ ಇಲಾಖೆಯ ಅಂದಾಜು ಮೊತ್ತದ ಮೇಲೆ ಶೇಕಡವಾರು ಇಂತಿಷ್ಟು ಹೆಚ್ಚು/ ಕಡಿಮೆ ಎಂಬುವುದನ್ನು ಮಾತ್ರ ಟೆಂಡರ್ ನಮೂನೆಯಲ್ಲಿ ನಿಖರವಾಗಿ/ ಸ್ಪಷ್ಟವಾಗಿ ನಮೂದಿಸುವುದು. ಈ ದರವು ಕಾಮಗಾರಿಯ ವೆಚ್ಚ/ ಸಾಮಾಗ್ರಿಗಳ ವೆಚ್ಚ/ಎಲ್ಲಾ ತೆರಿಗೆಗಳು/ಸರಕು ಸಾಗಾಣಿಕೆ ವೆಚ್ಚ/ ಇತರೆ ಎಲ್ಲ ವೆಚ್ಚಗಳನ್ನು ಒಳಗೊಂಡಿರುತ್ತದೆ ಎಂದು ಟೆಂಡರುದಾರರು ತಿಳಿಯತಕ್ಕದ್ದು.
15. ಟೆಂಡರಿನಲ್ಲಿ ಭಾಗವಹಿಸುವವರು ಟೆಂಡರಿಗೆ ನಿಗಧಿಪಡಿಸಿದ ದಿನಾಂಕದ ಮುಂಚಿತವಾಗಿ ಈ ವಿಭಾಗದಲ್ಲಿ 2018-19ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ಅಲ್ಲದೆ ಆದಾಯ ತೆರಿಗೆ PAN/GST ಸಂಖ್ಯೆ ಹೊಂದಿರಬೇಕು ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್ ದಿನದಂದು ಗುತ್ತಿಗೆದಾರರ ನೊಂದಾಣಿ ಮಾಡಲಾಗುವುದಿಲ್ಲ.
16. ಟೆಂಡರುದಾರರು ಮೇಲಿನ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಅವರ ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳಬೇಕು.
17. ಅಪ್ರಾಪ್ತ ವಯಸ್ಕರು/ ಕಾನೂನಿನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಯದಂತೆ, ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅಂತಹ ವಿಚಾರ ತಿಳಿದಲ್ಲಿ ಆ ಗುತ್ತಿಗೆಯನ್ನು ರದ್ದುಗೊಳಿಸಿ ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ./ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
18. **2019-20ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ ಮತ್ತು ಅಂದಾಜು ಪಟ್ಟಿಗಳ ಮಂಜೂರಾತಿಯ ನಿರೀಕ್ಷೆಯ ಮೇರೆ ಈ ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದೆ. ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆದ ನಂತರ ಅಂದಾಜು ಪಟ್ಟಿಗಳನ್ನು ನೀಡಲಾಗುವುದು**.
19. ಟೆಂಡರ್ ಅಂಗೀಕರಿಸಿದ ನಂತರ ಅನುಮೋದನೆ ಕುರಿತು ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು ಅಲ್ಲಿಯವರೆಗೆ ಸಫಲ ಟೆಂಡರುದಾರರ ಇ.ಎಂ.ಡಿ ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಈ ಅವಧಿಯಲ್ಲಿ ಟೆಂಡರುದಾರರು ಇ.ಎಂ.ಡಿ ಹಣವನ್ನು ವಾಪಸ್ಸು ಪಡೆಯಲು/ ಯಾವುದೇ ಬಡ್ಡಿಯನ್ನು ಪಡೆಯಲು ಅವಕಾಶವಿರುವುದಿಲ್ಲ.
20. ಅತೀ ಕಡಿಮೆ ದರ ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅವುಗಳ ಪೈಕಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಆದ್ದರಿಂದ ಅಂತಹ ಟೆಂಡರುದಾರರು ರಾಜಿ ಒಪ್ಪಂದ ಮಾಡಿಕೊಂಡು ಅಂತಿಮವಾಗಿ ತಿಳಿಸಲಾಗುವ ರಾಜಿ ಒಪ್ಪಂದದ ಲಿಖಿತ ತೀರ್ಮಾನವನ್ನು ಅಂತಿಮಗೊಳಿಸಲಾಗುವುದು.
21. ಗುತ್ತಿಗೆದಾರರು ತಮ್ಮದೇ ಆದ ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಸಲ್ಲಿಸಲ್ಪಟ್ಟಲ್ಲಿ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು. ಈ ಬಗ್ಗೆ ಏನಾದರು ತಕರಾರುಗಳು ಉಂಟಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕಲಬುರಗಿ ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.
22. ಮೇಲಿನ ಕಾಮಗಾರಿಗಳನ್ನು ಕಡ್ಡಾಯವಾಗಿ ನಿಗಧಿಪಡಿಸಲಾದ ದಿನಾಂಕದೊಳಗೆ ಪೂರ್ಣಗೊಳಿಸಿ ಚೆಕ್‌ಮೆಜ್‌ರ್‌ಮೆಂಟ್ (ಕಾಮಗಾರಿಗಳ ಅಳತೆ ಪುಸ್ತಕದಲ್ಲಿ ಅಳತೆ ದಾಖಲಿಸಿದ ನಂತರ) ಮಾಡಿಸಿ ಸಾದಿಲ್ವಾರು ವೆಚ್ಚದ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ಅನುವು ಮಾಡಿಕೊಡತಕ್ಕದ್ದು.
23. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರಗಿ ವೃತ್ತ, ಕಲಬುರಗಿ / ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕಲಬುರಗಿ ಇವರು ಟೆಂಡರುಗಳನ್ನು ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
24. ಟೆಂಡರಿನಲ್ಲಿ ಸಫಲರಾದ ಅರಣ್ಯ ಗುತ್ತಿಗೆದಾರರಿಗೆ ಸ್ಥಿರೀಕರಣ ಆದೇಶ ನೀಡಿದ **07 ದಿನಗಳ** ಒಳಗೆ ಅವರು ಈ ಕಚೇರಿಗೆ ಹಾಜರಾಗಿ ಕಾಮಗಾರಿಯ ಒಟ್ಟು ಮೊತ್ತದ **ಶೇ. 07.50 ಭದ್ರತಾ ಠೇವಣಿಯನ್ನು ಮುಂಗಡವಾಗಿ** ಇಲಾಖೆಗೆ ನೀಡಿ (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ ನೀಡುವ ಟೆಂಡರುದಾರರು ಬ್ಯಾಂಕ್ ಗ್ಯಾರಂಟಿ ಅವಧಿಯನ್ನು **15 ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) **ರೂ.100.00 (ಒಂದು ನೂರು ಮಾತ್ರ)** ಸರ್ಕಾರಿ ಛಾಪ ಕಾಗದದಲ್ಲಿ ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ಪಡೆದ ನಂತರ ನಿಗಧಿಪಡಿಸಿದ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸತಕ್ಕದ್ದು, ಕಾಮಗಾರಿಯ ಅವಧಿಯನ್ನು ವಿಸ್ತರಿಸುವ/ ಕಡಿಮೆಗೊಳಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕಲಬುರಗಿ ಇವರು ಹೊಂದಿರುತ್ತಾರೆ.

25. ಟೆಂಡರುದಾರರು ಟೆಂಡರಿನಲ್ಲಿ ನಮೂದಿಸಿದಂತಹ ಕಾಮಗಾರಿಯನ್ನು ಈ ಹಿಂದೆ ಅಂದರೆ ಕಳೆದ ಎರಡು ವರ್ಷಗಳಲ್ಲಿ ನಿರ್ವಹಿಸಿದ ಬಗ್ಗೆ ದೃಢೀಕರಣ ಪತ್ರವನ್ನು ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

26. ಒಂದು ವೇಳೆ ಟೆಂಡರುದಾರರು ಇಲಾಖೆಯಿಂದ ನಿಗಧಿಪಡಿಸಿದ ಕಾಮಗಾರಿಯ ಅಂದಾಜು ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ದರಸೂಚಿಸಿ ಅವರು ಸೂಚಿಸಿರುವ ದರವನ್ನು ಇಲಾಖೆಯಿಂದ ಅಂಗೀಕರಿಸಲ್ಪಟ್ಟಲ್ಲಿ ಇಲಾಖೆಯ ದರ ಮತ್ತು ಟೆಂಡರುದಾರರ ದರಕ್ಕೆ ಇರುವ ವ್ಯತ್ಯಾಸದ ಮೊತ್ತವನ್ನು (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ ನೀಡುವ ಟೆಂಡರುದಾರರು ಬ್ಯಾಂಕ್ ಗ್ಯಾರಂಟಿ ಅವಧಿಯನ್ನು **15 ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) ಕರಾರು ಒಪ್ಪಂದ ಮಾಡಿಕೊಳ್ಳುವ ಅವಧಿಯಲ್ಲಿ ಇಲಾಖೆಗೆ ಮುಂಗಡವಾಗಿ ನೀಡಲು ಟೆಂಡರುದಾರರು ಬದ್ಧರಾಗಿರಬೇಕು.

27. ಮೇಲಿನ ಕಾಮಗರಿಗಳ ಅನುಷ್ಠಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರಗಿ ವೃತ್ತ, ಕಲಬುರಗಿ ಇವರಿಂದ ಅನುಮೋದಿಸಲ್ಪಡುವ ವಾರ್ಷಿಕ ಕ್ರಿಯಾ ಯೋಜನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಸರ್ಕಾರದಿಂದ ಹಣ ಬಿಡುಗಡೆಯಾಗಲು ತಡವಾದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

28. ಅನುಮೋದಿತ ಕೆಲಸಗಳು ಕಾಲೋಚಿತವಾಗಿ/ ನಿಗಧಿತ ಅವಧಿಯೊಳಗೆ ಪೂರ್ಣಗೊಂಡ ನಂತರ ಸದರಿ ಕೆಲಸಗಳ ಬಗ್ಗೆ ನಿಯಮಾನುಸಾರ ಸಂಬಂಧಿಸಿದ ಅಧಿಕಾರಿಗಳಿಂದ **100% ರಷ್ಟು** ಪರಿಶೀಲನೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಹಣ ಪಾವತಿಗಾಗಿ ಸಂಬಂಧಿಸಿದ ಬಿಲ್ಲನ್ನು ಅಳತೆ ಪುಸ್ತಕ (ಎಂ.ಬಿ/ಎಫ್.ಎನ್.ಬಿ), ನಿರ್ವಹಿಸಲಾದ ಕಾಮಗಾರಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗಿದೆ ಎಂಬ ದೃಢೀಕರಣ ಪತ್ರ ಮತ್ತು ಪೂರ್ಣಗೊಂಡ ಕಾಮಗಾರಿಯ ಛಾಯಾ ಚಿತ್ರದೊಂದಿಗೆ ವೆಚ್ಚವನ್ನು ಭರಿಸಲು ಈ ಕಚೇರಿಗೆ ಒಪ್ಪಿಸಬೇಕಾಗಿರುತ್ತದೆ. ಹಣ ಸಂದಾಯ ಮಾಡುವಾಗ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ/ ಸರ್‌ಚಾರ್ಜ್/ ಮಾರಾಟ ತೆರಿಗೆ/ ರಾಜಧನ/ ಕಾರ್ಮಿಕ ಕಲ್ಯಾಣ ನಿಧಿ/ ಇತರೆ ತೆರಿಗೆ ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಬಿಲ್ಲಿನಲ್ಲಿಯೇ ಕಡಿತಗೊಳಿಸಲಾಗುವುದು. ಅವುಗಳನ್ನು ಕಡಿತಗೊಳಿಸುವಲ್ಲಿ/ ಪಾವತಿಸುವಲ್ಲಿ ಅರಣ್ಯ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

29. ಕಾಮಗಾರಿಗಳ ವೆಚ್ಚದ ಬಿಲ್ಲನ್ನು ಪಾವತಿ ಮಾಡುವಾಗ 2018–19ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ವಸೂಲಿ ಮಾಡಲಾಗುವ ಚಾಲ್ತಿಯಲ್ಲಿರುವ ತೆರಿಗೆ/ ಇತರೆ ಕಟಾವಣೆಗಳ ದರದಲ್ಲಿ ನಂತರ ಯಾವುದಾದರೂ ಬದಲಾವಣೆಗಳು ಆದಲ್ಲಿ ಅಂತಹ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರರು ಯಾವುದೇ ತಕರಾರು ಮಾಡದೇ ಕಡ್ಡಾಯವಾಗಿ ಸರ್ಕಾರಕ್ಕೆ ಪಾವತಿಸಲು ಬದ್ಧರಾಗಿರಬೇಕು.

30. ಕಾಮಗಾರಿಗಳಿಗೆ ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ/ ಸೌಕರ್ಯಗಳನ್ನು ಸ್ವತಃ ಗುತ್ತಿಗೆದಾರರೇ ನೀಡಬೇಕು. ಕಾಮಗಾರಿ ನಿರ್ವಹಿಸುವಾಗ ಗುತ್ತಿಗೆದಾರರಿಗೆ ಅಥವಾ ಅವರಿಂದ ನೇಮಿಸಲ್ಪಟ್ಟ ಕಾರ್ಮಿಕರಿಗೆ ಯಾವುದಾದರು ತೊಂದರೆ/ ನಷ್ಟ ಉಂಟಾದಲ್ಲಿ ಇಲಾಖೆಯು ಯಾವುದೇ ರೀತಿಯಲ್ಲಿ ಜವಾಬ್ದಾರಿ ಹೊಂದುವುದಿಲ್ಲ ಮತ್ತು ಸರ್ಕಾರದಿಂದ ಯಾವುದೇ ಪರಿಹಾರ ದೊರೆಯುವುದಿಲ್ಲ. ಅಂತಹ ಪರಿಹಾರವನ್ನು ಗುತ್ತಿಗೆದಾರರೆ ಸ್ವಂತ ಖರ್ಚಿನಿಂದ ಭರಿಸಬೇಕಾಗಿರುತ್ತದೆ.

31. ಟೆಂಡರಿಗೆ ನಮೂದಿಸಿರುವ ಕಾಮಗಾರಿಯ ಮೊತ್ತವು ಅಂದಾಜು ಮೊತ್ತವಾಗಿದ್ದು, ಹಣ ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣವನ್ನು ಪಾವತಿಸಲಾಗುವುದು. ಮಂಜೂರಾದ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಅದಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರು ಕಾಲಕಾಲಕ್ಕೆ ನೀಡುವ ಲಿಖಿತ/ ಮೌಖಿಕ ಆದೇಶಕ್ಕನುಗುಣವಾಗಿ ಇರತಕ್ಕದ್ದು. ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿರ್ವತನೆ/ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರಬೇಕಾಗುತ್ತದೆ.

32. ಮೇಲಿನ ಕಾಮಗಾರಿಗಳಿಗೆ ಮುಂಗಡವಾಗಿ ಹಣ ಪಾವತಿ ಮಾಡಲಾಗುವುದಿಲ್ಲ. ಭಾಗಶಃ ಕೆಲಸ/ ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡಲಾಗುವುದಿಲ್ಲ. ಅಲ್ಲದೆ ಟೆಂಡರುದಾರರ ಜವಾಬ್ದಾರಿಯ ಮೇಲೆ ಕಾಮಗಾರಿಯನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು. ಅಲ್ಲದೆ ಸದರಿ ಗುತ್ತಿಗೆದಾರರ ಭದ್ರತಾ ಹಣವನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು.

33. ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು. ಸಾಮಾನ್ಯವಾಗಿ ಗುತ್ತಿಗೆಯ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಅತೀ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸ್ಥಿರೀಕರಿಸಲಾದ ಕಾಮಗಾರಿಯ ದರದ **ಶೇ. 05** ರಷ್ಟು ಮೊತ್ತವನ್ನು ಗುತ್ತಿಗೆದಾರರಿಗೆ ದಂಡವೆಂದು ವಿಧಿಸಿ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

34. ಅರಣ್ಯ ಕೂಲಿಕಾರರ ಸಂಘ/ ಇತರೆ ಸಂಘಗಳು ಮೇಲಿನ ಕೆಲಸಗಳಿಗೆ ಟೆಂಡರ್ ನೀಡಲು ಇಚ್ಛಿಸಿದಲ್ಲಿ ಸಂಘಗಳ ನೋಂದಣಿ ನಿಯಮದಂತೆ ಸದರಿ ಸಂಘಗಳು ಕಡ್ಡಾಯವಾಗಿ ಅರಣ್ಯ ಗುತ್ತಿಗೆದಾರರಾಗಿ ಈ ವಿಭಾಗದಲ್ಲಿ ನೋಂದಣಿಯಾಗಿರಬೇಕು ಮತ್ತು ಇ.ಎಂ.ಡಿ/ ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

35. ಸಫಲ ಟೆಂಡರುದಾರರು ಕರಾರು ಒಪ್ಪಂದಕ್ಕೆ ಸಹಿ ಮಾಡಿದ ನಂತರ ಟೆಂಡರನ್ನು ಹಿಂತೆಗೆದುಕೊಂಡಲ್ಲಿ, ನಿಗಧಿತ ಅವಧಿಯ ಒಳಗೆ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ/ ನಿರಾಸಕ್ತಿ ಹೊಂದಿದ್ದಲ್ಲಿ ಅಂತಹ ಟೆಂಡರುದಾರರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲ ಮರು ಟೆಂಡರ್ ಮಾಡಲಾಗುವುದು. ಟೆಂಡರಿಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖಾ ವತಿಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ, ಸರ್ಕಾರಕ್ಕೆ ಉಂಟಾಗುವ ನಷ್ಟದ ಮೊತ್ತವನ್ನು 1963ರ ಕರ್ನಾಟಕ ಅರಣ್ಯ ಅಧಿನಿಯಮ ಸೆಕ್ಷನ್ 109ರ ಭೂ ಕಂದಾಯ ವಸೂಲಿಯಂತೆ ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. ಇದಕ್ಕೆ ಟೆಂಡರುದಾರರು ಬದ್ಧರಾಗಿರತಕ್ಕದ್ದು.

36. ಮೇಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನೀಡಲಾಗುವ ಭದ್ರತಾ ಠೇವಣಿ ಹಣವನ್ನು ಕಾಮಗಾರಿ ಪೂರ್ಣಗೊಂಡ **ಒಂದು ವರ್ಷದ** (ದುರಸ್ತಿ/ ನಿರ್ವಹಣೆ ಕಾಮಗಾರಿಗಳಿಗೆ) ನಂತರ ನಿರ್ವಹಿಸಲಾದ ಕಾಮಗಾರಿಯಲ್ಲಿ ಯಾವುದೇ ತೊಂದರೆ/ ದೋಷ ಇರುವುದಿಲ್ಲ ಎಂಬ **ನಿರಾಕ್ಷೇಪಣಾ** ಪತ್ರವನ್ನು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಂದ ಪಡೆದ ನಂತರವೇ ಹಿಂದಿರುಗಿಸಲಾಗುವುದು.

37. ಪೂರ್ಣಗೊಂಡ ಕಾಮಗಾರಿಯಲ್ಲಿ ಯಾವುದಾದರು ದೋಷಗಳು ಕಂಡುಬಂದಲ್ಲಿ ಅದನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಇಲಾಖಾ ವತಿಯಿಂದ ಸದರಿ ದೋಷಗಳನ್ನು ಸರಿಪಡಿಸಿಕೊಂಡ ನಂತರ ಗುತ್ತಿಗೆದಾರರು ನೀಡಿರುವ ಭದ್ರತಾ ಠೇವಣಿ ಹಣದಲ್ಲಿ ಸದರಿ ವೆಚ್ಚಗಳನ್ನು ಭರಿಸಲಾಗುವುದು. ಒಂದು ವೇಳೆ ನೀಡಲಾದ ಭದ್ರತಾ ಠೇವಣಿಗಿಂತ ಹೆಚ್ಚು ವೆಚ್ಚವಾದಲ್ಲಿ ಅಂತಹ ವ್ಯತ್ಯಾಸದ ಹಣವನ್ನು ಗುತ್ತಿಗೆದಾರರು ಯಾವುದೇ ತಂಟೆ-ತಕರಾರು ಮಾಡದೇ ಇಲಾಖೆಗೆ ನೀಡಲು ಬದ್ಧರಾಗಿರಬೇಕು.

38. **ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಕಲಬುರಗಿಯವರ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.**

39. **ಯಶಸ್ವಿ ಟೆಂಡರುದಾರರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅಗತ್ಯಬಿದ್ದರೆ ಅವಶ್ಯಕತೆ ಎನಿಸಿದ ಹೆಚ್ಚುವರಿ ಷರತ್ತುಗಳನ್ನು ವಿಧಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರಗಿ ಪ್ರಾದೇಶಿಕ ವಿಭಾಗ ಇವರದ್ದಾಗಿದ್ದು ಇದಕ್ಕೆ ಅರಣ್ಯ ಗುತ್ತಿಗೆದಾರರು/ ಟೆಂಡರುದಾರರು ಬದ್ಧರಾಗಿರಬೇಕು.**

40. ಗುತ್ತಿಗೆದಾರರು ಕಾಮಗಾರಿಯನ್ನು/ ಕಾಮಗಾರಿಯ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ/ ವರ್ಗಾಯಿಸುವಂತಿಲ್ಲ. ಕಾಮಗಾರಿಯನ್ನು ಪ್ರಾರಂಭಿಸಿ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಬಿಟ್ಟು ಹೋದಲ್ಲಿ ಇಲಾಖೆಗೆ ನೀಡಿರುವ ಭದ್ರತಾ ಠೇವಣಿ ಮೊತ್ತವನ್ನು ಇಲಾಖೆಗೆ ಮುಟ್ಟುಗೋಲು ಹಾಕಿಕೊಂಡು ಉಳಿದಿರುವ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ ಜವಾಬ್ದಾರಿಯ ಮೇಲೆ ಇಲಾಖಾ ವತಿಯಿಂದ ಕೈಗೊಳ್ಳಲಾಗುವುದು ಹಾಗೂ ಅಂತವರನ್ನು **ಕಪ್ಪುಪಟ್ಟಿಗೆ** ಸೇರಿಸಲಾಗುವುದು.

41. ಯಶಸ್ವೀ ಟೆಂಡರುದಾರರು ಮುಂದೆ ಯಾವುದೇ ಹೆಚ್ಚುವರಿಯಾಗಿ ಭೌತಿಕ ಮತ್ತು ಆರ್ಥಿಕ ಗುರಿ ನಿಗದಿಪಡಿಸಿದಲ್ಲಿ ಮಂಜೂರಾದ ದರದಲ್ಲಿಯೇ ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು. ಮುಂದೆ ಯಾವುದೇ ಟೆಂಡರು ಪ್ರಕ್ರಿಯೆ ನಡೆಸಲಾಗುವುದಿಲ್ಲ.

42. ಕಾಮಗಾರಿಗಳಿಗೆ ಬಳಸುವ ಸಾಮಾಗ್ರಿಗಳ ಗುಣಮಟ್ಟ ಮತ್ತು ಪರಿಮಾಣವನ್ನು (As per Tender Specification) ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಂದ ಪರಿಶೀಲನೆ ನಡೆಸಿ, ದೃಢೀಕರಣ ಪಡೆದ ನಂತರ ಕಾಮಗಾರಿಗೆ ಬಳಸತಕ್ಕದ್ದು ಮತ್ತು ಕಾಮಗಾರಿಯನ್ನು ಪರಿಣಿತ ಕೆಲಸಗಾರರ ಮೂಲಕ ಮಾತ್ರ ನಿರ್ವಹಿಸತಕ್ಕದ್ದು.

43. ಟೆಂಡರ್ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರಗಿ ವೃತ್ತ, ಕಲಬುರಗಿ ಇವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು **ಕಲಬುರಗಿ ಜಿಲ್ಲೆಯ** ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.

44. ಕಾಮಗಾರಿಗಳ ವಿವರ/ ಮಾಹಿತಿ/ನಿಬಂಧನೆಗಳ ಬಗ್ಗೆ ಈ ಕೆಳ ಸಹಿದಾರರ ಕಚೇರಿಯಿಂದ/ ಸಂಬಂಧಪಟ್ಟ ವಲಯ ಕಚೇರಿಗಳಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

45. ಗುತ್ತಿಗೆದಾಡು ಸಿಬ್ಬಂದಿ/ ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬದ್ಧನಾಗಿದ್ದು ಅವುಗಳಲ್ಲಿ ಸೃಚಿಸಲಾಗಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

    **i** Workmans Compensaion Act 1923
    ii Payment of wages Act 1935
    iii Minimum wage Act 1948
    iv Child labour Act 1938
    v Employer's liability Act 1938
    vi Other acts of Central & State that may applicable time to time.

46. ಕೆತ್ತನೆ ಕೆಲಸಕ್ಕೆ (Art work) ಸಂಬಂಧಿಸಿದ ಕಾಮಗಾರಿಗಳಿಗೆ ಗುತ್ತಿಗೆದಾರರು ಸದರಿ ಕೆಲಸದಲ್ಲಿ ಪರಿಗಣಿತಿ ಹೊಂದಿದ ಬಗ್ಗೆ ಪ್ರಮಾಣಪತ್ರ ಸಲ್ಲಿಸುವುದರ ಜೊತೆಗೆ ಇಂತಹ ಕಾಮಗಾರಿಗಳನ್ನು ಕಳೆದ ಮೂರು ವರ್ಷಗಳಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂದಿಸಿದ ಅಧಿಕಾರಿಗಳಿಂದ ಪ್ರಮಾಣೀಕರಿಸಿ ಸಲ್ಲಿಸಿವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪ್ರಾದೇಶಿಕ ವಿಭಾಗ, ಕಲಬುರಗಿ,

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:**

1. ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ: 08472–256601